# ಮನಸ್ಸಿದ್ದಂತೆ ಮಹಾದೇವ

■ ಮಲ್ಲಿಕಾರ್ಜುನ ಸುರಧೇನುಪುರ
ಕಲೆ: ಸಂತೋಷ ಸಸಿಹಿತ್ಲು



ಬಸವಲಿಂಗಪ್ಪ ಬಡಾವಣೆಗೆ ಹೊಂದಿಕೊಂಡಂತೆ ಮಂಜುನಾಥ ಅವರ ಸ್ವಯಾರ್ಜಿತ ಹತ್ತು ಗುಂಟೆ ಜಮೀನು ಇತ್ತು. ಅದನ್ನು ಮಂಜುನಾಥ ಅವರ ಹಿರಿಯ ಮಗನಾದ ವಿಶ್ವನಾಥ ಮತ್ತು ಕಿರಿಯ ಮಗನಾದ ಸೋಮನಾಥ ಸಮನಾಗಿ ಹಂಚಿಕೊಂಡಿದ್ದರು. ಅಲ್ಲಿಯೇ ವಾಸಕ್ಕೆ ಮನೆಗಳನ್ನು ಕಟ್ಟಿಕೊಂಡು ಜೀವನ ಮಾಡುತ್ತಿದ್ದರು. ಹುಟ್ಟುತ್ತ ಅಣ್ಣ ತಮ್ಮಂದಿರು ಬೆಳೆಯುತ್ತ ದಾಯಾದಿಗಳು ಎನ್ನುವ ಹಾಗೆ ಅವರಲ್ಲಿ ಹೇಳಿಕೊಳ್ಳುವಂತಹ ಅನ್ಯೋನ್ಯತೆ ಇರಲಿಲ್ಲ. ಇಬ್ಬರೂ ವಿದ್ಯಾವಂತರಾಗಿದ್ದರು. ಆಡಿಕೊಳ್ಳುವವರ ಬಾಯಿಗೆ ಎಲೆ ಅಡಿಕೆ ಆಗಬಾರದು ಅಂತ 'ಜಾಣರಿಗೆ ಜಗಳವಿಲ್ಲ' ಎನ್ನುವ ನೀತಿಗೆ ಬದ್ಧರಾಗಿದ್ದರು. ಅವರಿಬ್ಬರ ಮನೆಗಳು ಗ್ರಾಮದ ಮುಖ್ಯ ರಸ್ತೆಗೆ ಅಭಿಮುಖವಾಗಿ ಇದ್ದವು. ರಸ್ತೆ ಬದಿಗೆ ಇದ್ದ ತುಂಬಾ ಹಳೆಯದಾದ ಮರ ಬಿರುಗಾಳಿಯ ಹೊಡೆತಕ್ಕೆ ಉರುಳಿಬಿತ್ತು. ರಸ್ತೆಗೆ ಬಿದ್ದ ಮರವನ್ನು ಪಂಚಾಯ್ತಿಯ ಕಾರ್ಮಿಕರು ಪಕ್ಕಕ್ಕೆ ತಳ್ಳಿದರು. ಸೋಮನಾಥ ಮರದ ಕಾಂಡ ಕೊಂಬೆ, ರೆಂಬೆಗಳನ್ನು ಕೊಡಲಿಯಿಂದ ಸಿಗಿದು ತನ್ನ ಮನೆಯ ಮುಂದೆಯೇ ಜೋಡಿಸಿಟ್ಟ. ಅಣ್ಣ ವಿಶ್ವನಾಥನಿಗೆ ಯೋಚನೆ 'ಅಕಸ್ಮಾತ್ ರಸ್ತೆಯಲ್ಲಿ ಅಡ್ಡಾಡುವವರು ಬೀಡಿ, ಸಿಗರೇಟು ಸೇದಿ ಇತ್ತ ಕಡೆ ಎಸೆದರೆ ಮರದ ಸೌದೆಯ ಜೊತೆಗೆ ನಮ್ಮ ಹುಲ್ಲಿನ ಬಣವೆ, ದನ ಕರುಗಳ ಮನೆ ಎಲ್ಲವೂ ಬೆಂಕಿಗೆ ಆಹುತಿಯಾಗುತ್ತವೆ. ಮನೆಯ ಮುಂದೆ ಇರುವ ಸೌದೆಯನ್ನು ಮನೆಯ ಹಿಂದಕ್ಕೆ ಇಟ್ಕೋ' ಅಂತ ತಮ್ಮನಿಗೆ ಹೇಳಿದ. ಸೋಮನಾಥ ಬಿಡುವು ಆದಾಗ ನೋಡೋಣ ಅಂತ ಹಾರಿಕೆಯ ಉತ್ತರ ಕೊಟ್ಟು ಸುಮ್ಮನಾದ.

ವಿಶ್ವನಾಥ ಈ ವಿಚಾರವನ್ನು ತನ್ನ ಆಪ್ತ ಮಿತ್ರ ಪೂಜಾರಿ ಯಲ್ಲಪ್ಪನಿಗೆ ಹೇಳಿದ. ಯಲ್ಲಪ್ಪ 'ನಮ್ಮ ಕೈಲಿ ಏನಿದೆ ಎಲ್ಲ ಮಹಾದೇವನ ಆಟ, ಬರುವ ಸೋಮವಾರ ಬ್ರಾಹ್ಮಿ ಮುಹೂರ್ತ, ಅಂದರೆ ಸೂರ್ಯ ಉದಯಿಸುವ ಮುನ್ನ ನಲವತ್ತೆಂಟು ನಿಮಿಷಗಳ ಅವಧಿ, ಆಗ ಬಂದು ಕುಟುಂಬ ಸಮೇತ ಪೂಜೆ ಸಲ್ಲಿಸು, ನಿನ್ನ ಎಲ್ಲಾ ಸಮಸ್ಯೆಗಳು ಸೂರ್ಯನ ಕಿರಣಗಳಿಗೆ ಮಂಜು ಕರಗಿ ಹೋಗುವ ಹಾಗೆ ಕರಗಿ ಹೋಗುತ್ತವೆ' ಎಂದು ಸಲಹೆ ನೀಡಿದ. ಅಂತೆಯೇ ವಿಶ್ವನಾಥ ತನ್ನ ಹೆಂಡತಿ, ಇಬ್ಬರು ಮಕ್ಕಳ ಜೊತೆ ಬ್ರಾಹ್ಮಿ ಮುಹೂರ್ತದಲ್ಲಿ ಗ್ರಾಮದ ಮಹಾದೇವ ದೇವಸ್ಥಾನಕ್ಕೆ ಪೂಜೆ ಸಲ್ಲಿಸಿ, ಆಗು–ಹೋಗುಗಳೆಲ್ಲ ಶಿವನಾಣತಿಯಂತೆ ಅಂತ 'ಸತ್ಯಹರಿಶ್ಚಂದ್ರ' ಚಿತ್ರದ ಗೀತೆಯ ಗುನುಗುತ್ತ ನಿರಾಳನಾದ.

ಒಂದು ವಾರದ ನಂತರ ಮುಖ್ಯ ರಸ್ತೆಗೆ ಟಾರು ಹಾಕಲು ನಾಲ್ಕಾರು ಕುಟುಂಬಗಳ ಇಪ್ಪತ್ತು ಮಂದಿಯ ಸೈನ್ಯ, ಸೋಮನಾಥನ ಮನೆಯ ಪಕ್ಕದಲ್ಲಿ ಇದ್ದ ಸರ್ಕಾರಿ ಜಾಗದಲ್ಲಿ ಟೆಂಟುಗಳನ್ನು ಹಾಕಿಕೊಂಡರು. ಕಾಂಟ್ರ್ಯಾಕ್ಟರ್ ಟಾರು ತುಂಬಿದ ಡ್ರಮ್ಮುಗಳ ತಂದಿಳಿಸಿದ. ಡ್ರಮ್ ಕಾಯಿಸಿದರೆ ಅದರಲ್ಲಿಯ ಟಾರ್ ದ್ರವರೂಪಕ್ಕೆ ಬರುತ್ತಿತ್ತು. ಆಗ ಅದನ್ನ ಜೆಲ್ಲಿ ಹಾಕಿ ರಸ್ತೆ ಗುಂಡಿಗಳ ಮೇಲೆ ಸುರಿಯಬೇಕಿತ್ತು. ಟಾರು ಹಾಕುವವರು ಸೋಮನಾಥನ ಮನೆಯ ಸೌದೆಯ ಉಪಯೋಗ ಮಾಡಿಕೊಳ್ಳಲು ಊರಿನ ಪಂಚಾಯ್ತಿ ಸದಸ್ಯ ಗೋವರ್ಧನ ಹೇಳಿದ್ದ.

ಟಾರು ಹಾಕುವವರು ಸೌದೆ ತೆಗೆದುಕೊಳ್ಳಲು ಸೋಮನಾಥ ಒಪ್ಪಲಿಲ್ಲ. ಅಲ್ಲಿಗೆ ಬಂದ ಗೋವರ್ಧನ 'ನೀವು ಸಾರ್ವಜನಿಕ ಸ್ವತ್ತಾದ ಜೀವಿ ಮರವನ್ನು ಉರುಳಿಸಿ, ದುರುಪಯೋಗ ಮಾಡಿಕೊಂಡಿದ್ದೀರಿ, ಅದರ ಮಾರುಕಟ್ಟೆ ಮೌಲ್ಯ ಕಡಿಮೆ ಎಂದರೂ ಹತ್ತು ಸಾವಿರ. ನಿಮ್ಮಿಂದ ವಸೂಲಿ ಮಾಡಿ ಪಂಚಾಯ್ತಿಗೆ ಕಟ್ಟಿಸಿ ಅಂತ ಸಾಮಾಜಿಕ ಹೋರಾಟಗಾರ ಜೇಮ್ಸ್ ಅವರು ಪಂಚಾಯ್ತಿಗೆ ದೂರು ನೀಡಿದ್ದಾರೆ. ಈ ಸೌದೆಗಳು ಇಲ್ಲೇ ಇದ್ದರೆ ಸಾಕ್ಷಿಯಾಗುತ್ತವೆ, ನೀವು ಹತ್ತು ಸಾವಿರ ದಂಡ ಕೊಡಬೇಕಾಗುತ್ತದೆ. ಉರಿದು ಬೂದಿಯಾದರೆ ಶಿಥಿಲವಾಗಿ ಬಿದ್ದು ಬಿದ್ದು ಹೋಗಿದ್ದು ಟಾರು ಕಾಯಿಸಲು ಉರುವಲು ಆಗಿ ಬಳಸಿದ್ದೇವೆ ಅಂತ ಷರಾ ಬರೆದುಕೊಳ್ಳುತ್ತೇವೆ ಎಂದು ಸೋಮನಾಥನಿಗೆ ತಿಳಿಹೇಳಿದ. ಪ್ರಕರಣದ ಗಂಭೀರತೆಯನ್ನು ಅರಿತುಕೊಂಡ ಸೋಮನಾಥ ಬೀಸೋ ದೊಣ್ಣೆ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು ಅಂತ ಸುಮ್ಮನಾದ. ಸಂಗ್ರಹಣೆ ಮಾಡಿ ಇಟ್ಟಿದ್ದ ಸೌದೆಗಳು ಖಾಲಿಯಾದವು. ವಿಶ್ವನಾಥನಿಗೆ 'ಮನಸ್ಸಿದ್ದಂತೆ ಮಹಾದೇವ' ಎಂಬುದು ಮನದಟ್ಟಾಯಿತು. ■